

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 30-08-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

اَشۡهَدُ اَنۡ لَّاۤ اِلٰهَ اِلَّا اللّٰهُ وَحۡدَهٗ لَا شَرِيۡكَ لَهٗ وَ اَشۡهَدُ اَنَّ مُحَمَّدًا عَبۡدُهٗ وَ رَسُوۡلُهٗ۔ اَمَّا بَعۡدُ

فَاَعُوۡذُ بِاللّٰهِ مِنَ الشَّيۡطٰنِ الرَّجِيۡمِ۔ بِسۡمِ اللّٰهِ الرَّحۡمٰنِ الرَّحِيۡمِ۔

اَلۡحَمۡدُ لِلّٰهِ رَبِّ الۡعٰلَمِيۡنَ ۙ الرَّحۡمٰنِ الرَّحِيۡمِ ۙ مٰلِكِ يَوۡمِ الدِّيۡنِ ؕ اِيَّاكَ نَعۡبُدُ وَ اِيَّاكَ نَسۡتَعِيۡنُ ؕ

اِهۡدِنَا الصِّرَاطَ الۡمُسۡتَقِيۡمَ ۙ صِرَاطَ الَّذِيۡنَ اَنۡعَمۡتَ عَلَيۡهِمۡ ۬ۙ غَيۡرِ الۡمَغۡضُوۡبِ عَلَيۡهِمۡ وَ لَا الضَّآلِّيۡنَ ٪

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ಪ್ರಸ್ತಾಪಿಸುವ ಬದರಿ ಸಹಾಬರಲ್ಲಿ ಮೊದಲನೆಯವರ ಹೆಸರು ಹಝ್ರತ್ ಉತ್‌ಬ ಬಿನ್ ಮಸ್‌ಊದ್ ಹಝ್ಲೀ(ರ). ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಅವರ ಸಹೋದರರಾಗಿದ್ದರು. ಅವರು ಮಕ್ಕದಲ್ಲಿ ಇಸ್ಲಾಮ್ ಧರ್ಮವನ್ನು ಮೊದಲು ಸೇರುವವರಲ್ಲಿ ಒಬ್ಬರಾಗಿದ್ದರು. ಅಬಿಸೀನಿಯಾ ದೇಶಕ್ಕೆ ದ್ವಿತೀಯ ಸಾರಿ ಹಿಜ್‌ರತ್ ಮಾಡಿದವರಲ್ಲಿ ಅವರು ಸೇರಿದ್ದರು. ಅವರು ಅಸ್‌ಹಾಬುಸ್ಸುಫ್ಫದವರಲ್ಲಿ ಒಬ್ಬರಾಗಿದ್ದರು. ಅಸ್‌ಹಾಬುಸ್ಸುಫ್ಫ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹೀಗೆ ಬರೆದಿದ್ದಾರೆ: ಮಸ್‌ಜಿದ್‌ನ ಒಂದು ಬದಿಯಲ್ಲಿ ಛಾವಣಿ ಇರುವ ಒಂದು ಚಾವಡಿ ನಿರ್ಮಿಸಲಾಗಿತ್ತು. ಅದಕ್ಕೆ ಸುಫ್ಫ ಎಂದು ಹೇಳುತ್ತಿದ್ದರು. ಮನೆಯಿಲ್ಲದ ಬಡವರಾದ ಮುಹಾಜಿರ್‌ಗಳು ಅಲ್ಲಿ ವಾಸಿಸುತ್ತಿದ್ದರು. ಅವರನ್ನು ಅಸ್‌ಹಾಬುಸ್ಸುಫ್ಫ ಎಂದು ಕರೆಯಲಾಗುತ್ತಿತ್ತು. ಅವರು ರಾತ್ರಿ ಹಗಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹವಾಸದಲ್ಲಿದ್ದು ನಮಾಝ್ ನಿರ್ವಹಿಸುತ್ತಾ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಾ ಇದ್ದರು. ಅವರಿಗೆ ಸ್ಥಿರವಾದ ಜೀವನಾಧಾರವಿರಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಕೆಲವು ಸಾರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮನೆಯಲ್ಲಿದ್ದ ಆಹಾರ ಅವರಿಗೆ ನೀಡಿ ಸ್ವತಃ ಹಸಿದಿರುತ್ತಿದ್ದರು. ಅನ್‌ಸಾರ್‌ಗಳು ಸಹ ಅವರಿಗೆ ಸಾಧ್ಯವಿರುವಷ್ಟು ಆಹಾರ ಒದಗಿಸುತ್ತಿದ್ದರು. ಅವರಿಗೋಸ್ಕರ ಖರ್ಜೂರದ ಹಣ್ಣಿನ ಗೊಂಚಲುಗಳನ್ನು ತಂದು ಮಸ್‌ಜಿದ್‌ನಲ್ಲಿ ತೂಗು ಹಾಕುತ್ತಿದ್ದರು. ಹೀಗಿದ್ದರೂ ಅವರ ಸ್ಥಿತಿ ಬಹಳ ಕೊರತೆಯದಾಗಿತ್ತು. ಕೆಲವು ಸಾರಿ ಹಸಿದಿರಬೇಕಾಗುತ್ತಿತ್ತು. ಈ ಸ್ಥಿತಿ ಅನೇಕ ವರ್ಷಗಳ ಕಾಲ ಮುಂದುವರಿಯಿತು. ಮದೀನದ ಜನಸಂಖ್ಯೆ ವರ್ಧಿಸಿದಾಗ ಅಂತಹ ಜನರಿಗೆ ಕೆಲಸ ದೊರಕಿತು. ಕೆಲವರಿಗೆ ಸಾಮುದಾಯಿಕ ಬೈತುಲ್ ಮಾಲ್‌ನಿಂದ ಸಹಾಯ ಧನ ಲಭಿಸುತ್ತಿತ್ತು.

ಈ ಜನರು ಹಗಲು ಹೊತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಯಲ್ಲಿದ್ದು ಅವರ ನುಡಿಗಳನ್ನು ಆಲಿಸುತ್ತಿದ್ದರು. ಅವರ ಪೈಕಿ ಯಾರಿಗೂ ಚಾದರ ಮತ್ತು ಲುಂಗಿ ಇವು ಎರಡು ಸಹ ಒಟ್ಟಿಗೆ ಇರಲಿಲ್ಲ. ಚಾದರ ಮಾತ್ರ ಇದ್ದವರು ಅದನ್ನು ಕೊರಳಿಗೆ ಕಟ್ಟಿ ತೊಡೆಯ ತನಕ ಮರೆಮಾಡುವಂತೆ ಮಾಡುತ್ತಿದ್ದರು. ಹಝ್ರತ್ ಅಬೂ ಹುರ್ರೈರ(ರ) ಇಂತಹ ಜನರಲ್ಲಿ ಒಬ್ಬರಾಗಿದ್ದರು. ಅವರು ಹೇಳುತ್ತಾರೆ: ಅಸ್‌ಹಾಬುಸ್ಸುಫ್ಫದಲ್ಲಿ ಎಪ್ಪತ್ತು ಜನರನ್ನು ನೋಡಿದೆ ಅವರ ಬಟ್ಟೆ ಅವರ ತೊಡೆಗಳನ್ನು ಮರೆಮಾಡುವಷ್ಟು ನೀಳವಾಗಿರಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಎಲ್ಲಿಂದಾದರೂ ಸದಖದ ರೂಪದಲ್ಲಿ ಏನಾದರೂ ಬಂದರೆ ಅದನ್ನು ಅಸ್‌ಹಾಬುಸ್ಸುಫ್ಫದವರಿಗೆ ಕಳುಹಿಸುತ್ತಿದ್ದರು. ಸತ್ಕಾರದ ಆಹಾರ ಬಂದರೆ ಅದನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಸ್‌ಹಾಬುಸ್ಸುಫ್ಫದವರೊಂದಿಗೆ ಕುಳಿತು ಸೇವಿಸುತ್ತಿದ್ದರು. ಕೆಲವೊಮ್ಮೆ ರಾತ್ರಿ ಹೊತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಜನರನ್ನು ಮುಹಾಜಿರ್‌ಗಳ ಮತ್ತು ಅನ್‌ಸಾರ್‌ಗಳ ಮಧ್ಯೆ ಅವರ ಆರ್ಥಿಕ ಸ್ಥಿತಿಗೆ ಅನುಸಾರವಾಗಿ ಹಂಚುತ್ತಿದ್ದರು. ಪ್ರತಿಯೊಬ್ಬ ಒಬ್ಬನನ್ನು ಅಥವಾ ಇಬ್ಬರನ್ನು ಕರೆದುಕೊಂಡು ಹೋಗಿ ಅವರಿಗೆ ರಾತ್ರಿ ಹೊತ್ತಿನ ಆಹಾರ ನೀಡುವಂತೆ ಮಾಡುತ್ತಿದ್ದರು. ಹಝ್ರತ್ ಸಅದ್ ಬಿನ್ ಉಬಾದ ಬಹಳ ಐಶರ್ಯವಂತರಾಗಿದ್ದರು. ಅವರು ಕೆಲವು ಸಾರಿ ಎಂಬತ್ತು ಅತಿಥಿಗಳನ್ನು ಕರೆದುಕೊಂಡು ಹೋಗುತ್ತಿದ್ದರು. ಅಸ್‌ಹಾಬುಸ್ಸುಫ್ಫದ ಸಂಖ್ಯೆ ವಿವಿಧ ಸಮಯಗಳಲ್ಲಿ ಬೇರೆ ಬೇರೆಯಾಗಿತ್ತು. ಕನಿಷ್ಠ ಸಂಖ್ಯೆ 12 ಮತ್ತು ಗರಿಷ್ಠ ಸಂಖ್ಯೆ ಆರು ನೂರು ಎಂದು ವರದಿಯಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಆ ಜನರೊಂದಿಗೆ ಬಹಳ ಪ್ರೀತಿ ಇತ್ತು. ಅವರೊಂದಿಗೆ ಮಸ್‌ಜಿದ್‌ನಲ್ಲಿ ಕುಳಿತಿರುತ್ತಿದ್ದರು ಮತ್ತು ಅವರೊಂದಿಗೆ ಕುಳಿತು ಊಟಮಾಡುತ್ತಿದ್ದರು. ಅವರನ್ನು ಗೌರವಭಾವದಿಂದ ಕಾಣಲು ಜನರೊಂದಿಗೆ ಹೇಳುತ್ತಿದ್ದರು.

ಒಮ್ಮೆ ಅಸ್‌ಹಾಬುಲ್‌ಸ್ಸುಫ್ಫದ ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಹೇಳಿದರು: ಖರ್ಜೂರವು ನಮ್ಮ ಹೊಟ್ಟೆಗಳನ್ನು ಸುಟ್ಟು ಹಾಕಿದೆ. ನಮಗೆ ತಿನ್ನಲು ಖರ್ಜೂರ ಮಾತ್ರ ದೊರಕುತ್ತಿದೆ. ಬೇರೇನೂ ಸಿಗುತ್ತಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿಮ್ಮ ಹೊಟ್ಟೆಗಳನ್ನು ಖರ್ಜೂರ ಸುಟ್ಟು ಹಾಕಿದೆ ಎಂದು ನೀವು ಹೇಳುತ್ತಿರುವಿರಿ. ಆದರೆ ಖರ್ಜೂರವೇ ಮದೀನದ ಜನರ ಆಹಾರವಾಗಿದೆ ಎಂದು ನಿಮಗೆ ತಿಳಿದಿಲ್ಲವೇ? ಆ ಜನರು ಅದರ ಮೂಲಕವೇ ನಮಗೆ ಸಹಾಯ ಮಾಡುತ್ತಾರೆ. ನಾವು ಸಹ ಅದರ ಮೂಲಕವೇ ನಿಮಗೆ ಸಹಾಯ ಮಾಡುತ್ತೇವೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪುನಃ ಹೇಳಿದರು: ಅಲ್ಲಾಹನಾಣೆ! ಅಲ್ಲಾಹನ ರಸೂಲರ ಅಡುಗೆ ಮನೆಯಲ್ಲಿ ಒಂದು ಅಥವಾ ಎರಡು ತಿಂಗಳಿಂದ ಹೊಗೆ ಹೊರಡಲಿಲ್ಲ. ಎಂದರೆ ನಾನು

ಮತ್ತು ನನ್ನ ಮನೆಯವರು ಸಹ ಖರ್ಜೂರ ಮತ್ತು ನೀರು ಕುಡಿದು ಜೀವಿಸಿದೆವು. ಈ ಅಸ್‌ಹಾಬುಸ್ಸುಫ್ಫದ ಜನರು ಪರಿಪೂರ್ಣ ನಿಷ್ಠೆಯಿಂದ ಅಲ್ಲಿಯೇ ವಾಸಿಸುತ್ತಿದ್ದರು. ಅವರಲ್ಲಿ ಓದು ಬರಹ ಕಲಿತವರು ಖಾರಿಗಳೆಂದು ಕರೆಯಲ್ಪಟ್ಟರು. ನಂತರ ಅವರನ್ನು ಅನ್ಯರಿಗೆ ಕಲಿಸಲು ಕಳುಹಿಸಲಾಯಿತು. ಅವರಲ್ಲಿ ಕೆಲವರು ಅನಂತರ ದೊಡ್ಡ ದೊಡ್ಡ ಹುದ್ದೆಗಳಲ್ಲಿ ನೇಮಿಸಲ್ಪಟ್ಟರು.

ಹಝ್ರತ್ ಉತ್‌ಬ ಬಿನ್ ಮಸ್‌ಊದರನ್ನು ಸಹೀಹ್ ಬುಖಾರಿ ಗ್ರಂಥದಲ್ಲಿ ಬದರೀ ಸಹಾಬರ ಪಟ್ಟಿಯಲ್ಲಿ ಸೇರಿಸಲಾಗಿದೆ. ಅವರು ಹಿಜರಿ 23ರಲ್ಲಿ ಹಝ್ರತ್ ಉಮರ್ ಬಿನ್ ಖತ್ತಾಬರ ಖಿಲಾಫತ್ ಕಾಲದಲ್ಲಿ ಮದೀನದಲ್ಲಿ ನಿಧನ ಹೊಂದಿದರು. ಹಝ್ರತ್ ಉಮರ್(ರ) ಅವರ ನಮಾಝೇ ಜನಾಝ ನಿರ್ವಹಿಸಿದರು. ಹಝ್ರತ್ ಉತ್‌ಬ ನಿಧನ ಹೊಂದಿದಾಗ ಅವರ ಸಹೋದರ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರ ಕಣ್ಣುಗಳು ಕಣ್ಣೀರಿನಿಂದ ತುಂಬಿದುವು. ಕೆಲವರು ಅವರೊಂದಿಗೆ ತಾವು ಅಳುತ್ತಿರುವಿರೋ? ಎಂದು ಕೇಳಿದರು. ಅವರು ಹೇಳಿದರು: ಉತ್‌ಬ ನನ್ನ ಸಹೋದರನಾಗಿದ್ದರು. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಯಲ್ಲಿ ನನ್ನ ಜೊತೆಗಿದ್ದರು. ಹಝ್ರತ್ ಉಮರ್ ಬಿನ್ ಖತ್ತಾಬ್‌ರ ನಂತರ ಅವರು ನನಗೆ ಇತರ ಎಲ್ಲರಿಗಿಂತಲೂ ಪ್ರಿಯರಾಗಿದ್ದರು.

ಮುಂದೆ ನಾನು ಪ್ರಸ್ತಾಪಿಸುವ ಸಹಾಬಿಯ ಹೆಸರು ಹಝ್ರತ್ ಉಬಾದ ಬಿನ್ ಸಾಮಿತ್(ರ). ಅವರು ಅನ್‌ಸಾರಿಯಾಗಿದ್ದು, ಬೈಅತೆ ಅಖ್‌ಬ ಊಲಾ ಮತ್ತು ಸಾನಿಯಾದಲ್ಲಿ ಭಾಗವಹಿಸಿದ್ದರು. ಅವರು ಖಝ್ರಜ್ ಗೋತ್ರದ ಬನೂ ಔಫ್ ಬಿನ್ ಖಝ್ರಜ್ ಕುಟುಂಬದ ನಾಯಕರಾಗಿದ್ದರು. ಹಝ್ರತ್ ಔಸ್ ಬಿನ್ ಸಾಮಿತ್ ಅವರ ಸಹೋದರರಾಗಿದ್ದರು. ಹಝ್ರತ್ ಔಸ್ ಸಹ ಬದರೀ ಸಹಾಬಿ ಆಗಿದ್ದರು. ಹಝ್ರತ್ ಉಬಾದರು ಬದರ್, ಉಹುದ್, ಖಂದಕ್ ಮೊದಲಾದ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಹಝ್ರತ್ ಉಬಾದ ಹಿಜರಿ 34ರಲ್ಲಿ ಪೆಲೆಸ್ತೀನಿನ ರಮಲ್ಲದಲ್ಲಿ ನಿಧನ ಹೊಂದಿದರು. ಕೆಲವರ ಅಭಿಪ್ರಾಯ ಪ್ರಕಾರ ಬೈತುಲ್ ಮುಖದ್ದಸ್‌ನಲ್ಲಿ ನಿಧನ ಹೊಂದಿದರು. ಅಲ್ಲಿಯೇ ಅವರು ದಫನು ಗೊಳಿಸಲ್ಪಟ್ಟರು. ಈಗ ಸಹ ಅವರ ಗೋರಿ ಅಲ್ಲಿ ಗುರುತಿಸಲ್ಪಡುತ್ತಿದೆ. ಅವರು ಮೃತರಾಗುವಾಗ ಅವರ ಪ್ರಾಯ 72. ಅವರು ಎತ್ತರ ಗಾತ್ರದವರೂ ದಷ್ಟಪುಷ್ಟರೂ ಬಹಳ ಸುಂದರರೂ ಆಗಿದ್ದರು. ಅವರು ವರದಿ ಮಾಡಿದ ಹದೀಸುಗಳ ಸಂಖ್ಯೆ 181 ಆಗಿವೆ. ಬೈಅತ್ ಅಖಬದಲ್ಲಿ ಬೈಅತ್ ಮಾಡಿದ ನೇತಾರರಲ್ಲಿ ಅವರು ಸಹ ಒಬ್ಬರಾಗಿದ್ದರು.

ಒಮ್ಮೆ ಹಝ್ರತ್ ನಬಿ ಕರೀಮ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಬಾದರನ್ನು ಕೆಲವು ಸದಖಗಳ ನಿರ್ವಾಹಕರನ್ನಾಗಿ ಮಾಡಿ ಅವರೊಂದಿಗೆ ಹೇಳಿದರು: ಅಲ್ಲಾಹನಿಗೆ ಭಯಪಡುತ್ತಾ ಇರಬೇಕು. ಖಿಯಾಮತ್ ದಿನ ನೀನು ಒಂಟೆಯನ್ನು ಹೊತ್ತು ಕೊಂಡಿದ್ದು ಅದು ಕೂಗುತ್ತಾ ಇರುವಂತಾಗದಿರಲಿ. ಅಥವಾ ಗೋವನ್ನು ನೀನು ಹೊತ್ತು ಕೊಂಡಿದ್ದು ಅದು ಶಬ್ದ ಹೊರಡಿಸುತ್ತಾ ಇರುವಂತಾಗದಿರಲಿ. ಎಂದರೆ ನೀನು ವಿಶ್ವಾಸವಂಚನೆ ಮಾಡಿದವನಾಗದಿರಲಿ. ನೀನು ಸದಖ ಮತ್ತು ಝಕಾತ್‌ಗಳನ್ನು ಸಂರಕ್ಷಿಸದವನೂ ಅವುಗಳನ್ನು ಸರಿಯಾಗಿ ಹಂಚದವನೂ ಆಗದಿರಲಿ. ಹಾಗೆ ಮಾಡಿದರೆ ಖಿಯಾಮತ್ ದಿನ ಅವು ನಿನ್ನ ಮೇಲೆ ಹೊರಿಸಲ್ಪಡುವುವು. ಹಝ್ರತ್ ಉಬಾದ ಬಿನ್ ಸಾಮಿತ್ ಈ ಮಾತನ್ನು ಆಲಿಸಿ ಹೇಳಿದರು: ತಮ್ಮನ್ನು ಸತ್ಯದೊಂದಿಗೆ ಕಳುಹಿಸಿದವನ ಆಣೆ ನಾನು ಇಬ್ಬರ ಮೇಲೆ ಸಹ ಕಾರ್ಯನಿರ್ವಾಹಕನಾಗಲಾರೆ. ನನ್ನ ಸ್ಥಿತಿ ಹೇಗಿದೆ ಎಂದರೆ ನಾನು ಯಾರ ಭಾರವನ್ನೂ ಹೊರಲಾರೆ. ಆದುದರಿಂದ ನನ್ನನ್ನು ನಿರ್ವಾಹಕನನ್ನಾಗಿ ಮಾಡದಿದ್ದರೆ ಉತ್ತಮವಾಗುವುದು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಕಾಲದಲ್ಲಿ ಅನ್‌ಸಾರ್‌ಗಳ ಪೈಕಿ ಐವರು ಪವಿತ್ರ ಖುರ್‌ಆನ್ ಸಂಗ್ರಹಿಸಿದ್ದರು. ಅವರ ಹೆಸರು: ಹಝ್ರತ್ ಮುಆದ್ ಬಿನ್ ಜಬಲ್, ಹಝ್ರತ್ ಉಬಾದ ಬಿನ್ ಸಾಮಿತ್, ಹಝ್ರತ್ ಅಬೀ ಬಿನ್ ಕಅಬ್, ಹಝ್ರತ್ ಅಬೂ ಅಯ್ಯೂಬ್ ಅನ್‌ಸಾರಿ ಮತ್ತು ಹಝ್ರತ್ ಅಬೂ ದರ್‌ದಾ. ಹಝ್ರತ್ ಯಝೀದ್ ಬಿನ್ ಸುಫ್‌ಯಾನ್ ಸಿರಿಯಾವನ್ನು ಜಯಿಸಿದ ನಂತರ ಹಝ್ರತ್ ಉಮರ್(ರ)ರಿಗೆ ಬರೆದರು: ಅವರಿಗೆ ಪವಿತ್ರ ಖುರ್‌ಆನ್ ಕಲಿಸಲು ಮತ್ತು ಧಾರ್ಮಿಕ ಜ್ಞಾನ ನೀಡಲು ಅಧ್ಯಾಪಕರ ಆವಶ್ಯಕತೆಯಿದೆ. ಹಾಗೆ ಹಝ್ರತ್ ಉಬಾದ, ಹಝ್ರತ್ ಅಬೂ ದರ್‌ದಾ, ಹಝ್ರತ್ ಮುಆಝರನ್ನು ಕಳುಹಿಸಲಾಯಿತು. ಹಝ್ರತ್ ಉಬಾದ ಪೆಲೆಸ್ತೀನ್‌ನಲ್ಲಿ ವಾಸಿಸಿದರು. ಜನಾದ ವರದಿ ಮಾಡುತ್ತಾರೆ: ನಾನು ಉಬಾದರನ್ನು ಭೇಟಿಯಾದಾಗ ಅವರಿಗೆ ಅಲ್ಲಾಹನ ಧರ್ಮದ ಬಗ್ಗೆ ಚೆನ್ನಾಗಿ ಜ್ಞಾನವಿರುವುದಾಗಿ ಭಾಸವಾಯಿತು. ಮುಸ್ಲಿಮರು ಸಿರಿಯಾವನ್ನು ಜಯಿಸಿದಾಗ ಹಝ್ರತ್ ಉಮರ್(ರ)ರವರು ಹಝ್ರತ್ ಉಬಾದ, ಹಝ್ರತ್ ಮುಆಝ್ ಬಿನ್ ಜಬಲ್ ಮತ್ತು ಹಝ್ರತ್ ಅಬೂ ದರ್‌ದಾರನ್ನು ಸಿರಿಯಕ್ಕೆ ಕಳುಹಿಸಿದರು. ಅಲ್ಲಿನ ಜನರಿಗೆ ಪವಿತ್ರ ಖುರ್‌ಆನ್ ಮತ್ತು ಧಾರ್ಮಿಕ ವಿಷಯಗಳನ್ನು ಕಲಿಸಲು.

ಹಝ್ರತ್ ಉಬಾದ ಪೆಲೆಸ್ತೀನ್‌ಗೆ ಹೋದರು. ಅಲ್ಲಿ ಅಮೀರ್ ಮುಆವಿಯ ಒಂದು ವಿಷಯಕ್ಕೆ ಸಂಬಂಧಿಸಿ ಅವರನ್ನು ವಿರೋಧಿಸಿದರು. ಅದನ್ನು ಹಝ್ರತ್ ಉಬಾದ ಇಷ್ಟಪಡಲಿಲ್ಲ. ಅಮೀರ್ ಮುಆವಿಯ ಹಝ್ರತ್ ಉಬಾದರೊಂದಿಗೆ ಕಟುವಾಗಿ ಮಾತನಾಡಿದರು. ಆಗ ಹಝ್ರತ್ ಉಬಾದ ಹೇಳಿದರು: ನಾನು ಒಂದೇ ಸ್ಥಳದಲ್ಲಿ ನಿಮ್ಮೊಂದಿಗೆ ಇರಲಾರೆ. ಅವರು ಅಲ್ಲಿಂದ ಮದೀನಕ್ಕೆ ಹೋದರು. ಹಝ್ರತ್ ಉಮರ್(ರ) ಕೇಳಿದರು: ನೀವು ಮರಳಿ ಬಂದುದರ ಕಾರಣವೇನು? ಹಝ್ರತ್ ಉಬಾದರು ಹಝ್ರತ್ ಉಮರ್‌ರಿಗೆ ಎಲ್ಲಾ ವಿಷಯಗಳನ್ನು ತಿಳಿಸಿದರು. ಹಝ್ರತ್ ಉಮರ್(ರ) ಹೇಳಿದರು: ನೀವು ನಿಮ್ಮ ಸ್ಥಳಕ್ಕೆ ಮರಳಿ ಹೋಗಿರಿ. ನೀವು ಅಥವಾ ನಿಮ್ಮ ಹಾಗೆ ಇರುವ ಇನ್ನೊಬ್ಬ ಅಲ್ಲಿ ಇಲ್ಲದಿದ್ದರೆ ಅಲ್ಲಾಹನು ಅಂತಹ ಭೂಮಿಯನ್ನು ಹಾಳುಗೆಡಹುವನು. ಆದುದರಿಂದ ನೀವು ಮರಳಿ ಹೋಗುವುದು ಆವಶ್ಯಕವಾಗಿದೆ. ಹಝ್ರತ್ ಉಮರ್(ರ) ಅಮೀರ್ ಮುಆವಿಯರಿಗೆ ಆದೇಶ ಬರೆದು ಕಳುಹಿಸಿದರು: ನಿಮಗೆ ಹಝ್ರತ್ ಉಬಾದರ ಮೇಲೆ ಯಾವ ಅಧಿಕಾರವೂ ಇಲ್ಲ ಎಂದು. ಹಝ್ರತ್ ಉಬಾದರ ಬಗ್ಗೆ ಬೇರೆ ವರದಿಗಳು ಸಹ ಇವೆ. ಇನ್‌ಶಾ ಅಲ್ಲಾಹ್ ಮುಂದಿನ ಖುತ್‌ಬದಲ್ಲಿ ವಿವರಿಸಲಾಗುವುದು.

ಈಗ ನಾನು ಒಬ್ಬ ಅಗಲಿ ಹೋದವರ ಬಗ್ಗೆ ಪ್ರಸ್ತಾಪಿಸುವೆನು. ಅವರ ಜನಾಝ ನಮಾಝ್ ಸಹ ನಿರ್ವಹಿಸುವೆನು – ಜನಾಝ ಹಾಝಿರ್. ಮುಕರ್ರಮ್ ತಾಹಿರ್ ಆರಿಫ್ ಸಾಹಿಬ್ ಆಗಸ್ಟ್ ದಿನಾಂಕ 26ರಂದು ಬಹಳ ಸಹನೆಯ ಪರೀಕ್ಷೆ ನೀಡುವ ರೋಗಭಾದಿತನಾಗಿ ಯು.ಕೆ.ಯಲ್ಲಿ ಅಲ್ಲಾಹನ ವಿಧಿ ನಿರ್ಣಯ ಪ್ರಕಾರ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರಿಗೆ ಕ್ಯಾನ್ಸರ್ ಆಗಿತ್ತು. ಅವರು ಬಹಳ ಸಹನೆಯಿಂದ ನೋವನ್ನು ಸಹಿಸಿದರು. ಅವರು ಸರಕಾರಿ ಹುದೆಯಲ್ಲಿದ್ದರು. ಅನಂತರ ನಾನು ಅವರನ್ನು ಫಝ್ಲ್ ಉಮರ್ ಫೌಂಡೇಶನ್ ಚೆಯರ್‌ಮಾನ್ ಆಗಿ ನೇಮಿಸಿದೆ. ಮುಕರ್ರಮ್ ತಾಹಿರ್ ಆರಿಫ್ ಸಾಹಿಬ್ 1952 ಫೆಬ್ರವರಿ ದಿನಾಂಕ 13ರಂದು ಜನಿಸಿದರು. ಅವರ ಪಿತ ಚೌಧರಿ ಮುಹಮ್ಮದ್ ಯಾರ್ ಆರಿಫ್ ಸಾಹಿಬ್ ಮುಬಲ್ಲಿಗ್ ಆಗಿದ್ದರು. ಅವರು ಇಂಗ್ಲೆಂಡಿನಲ್ಲಿ ಮುಬಲ್ಲಿಗರಾಗಿಯೂ ನಾಯಿಬ್ ಇಮಾಮ್ ಮಸ್ಜಿದ್ ಲಂಡನ್ ಆಗಿಯೂ ಸೇವೆ ಸಲ್ಲಿಸಿದ್ದರು. ಮುಹಮ್ಮದ್ ಯಾರ್ ಆರಿಫ್ ಸಾಹಿಬರು ರಬ್ವದಲ್ಲಿ ನಾಯಿಬ್ ವಕೀಲ್ ತಬ್‌ಶೀರ್ ತಹ್‌ರೀಕ್ ಜದೀದ್ ಆಗಿಯೂ ಕೆಲಸ ಮಾಡಿದ್ದರು. ಅವರು ಜಮಾಅತಿನ ಹಿರಿಯ ಮುನಾಝಿರ್ ಮತ್ತು ಶ್ರೇಷ್ಠ ಮಟ್ಟದ ಆಲಿಮ್ ಆಗಿದ್ದರು. ತಾಹಿರ್ ಆರಿಫರ ಮಾತೆ ಮುಹ್ತರಮ ಇನಾಯತ್ ಸುರಯ್ಯಾ ಬೇಗಮ್ ಆಗಿದ್ದರು. ಅವರ ಅಜ್ಜ ಹಝ್ರತ್ ಚೌಧರಿ ಗುಲಾಮ್ ಹುಸೈನ್ ಭಟ್ಟಿ ಸಾಹಿಬ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ ಆಗಿದ್ದರು. ತಾಹಿರ್ ಆರಿಫ್ ಸಾಹಿಬರು ಬಹಳ ಜ್ಞಾನಪ್ರಿಯರಾಗಿದ್ದರು. ಅವರು ನಿಪುಣ ಸಾಹಿತಿಯೂ ಆಗಿದ್ದರು. ಕವಿಯೂ ಆಗಿದ್ದರು. ಅವರು ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ. ಅವರ ಪದ್ಯಗಳ ಎರಡು ಸಂಕಲನಗಳು ಪ್ರಸಿದ್ಧವಾಗಿವೆ. ಅವರು ವಿದ್ಯಾರ್ಜನೆಗೋಸ್ಕರ ಇಂಗ್ಲೆಂಡಿನಲ್ಲಿ ವಾಸಿಸುತ್ತಾ ಇದ್ದಾಗ, ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾರವರ ನಿರ್ದೇಶ ಪ್ರಕಾರ ಚೌಧರಿ ರಶೀದ್ ಸಾಹಿಬರು ಇಂಗ್ಲಿಷ್‌ನಲ್ಲಿ ಮಕ್ಕಳಿಗೋಸ್ಕರ ಪಾಠ ಪುಸ್ತಕಗಳನ್ನು ರಚಿಸುತ್ತಾ ಇದ್ದಾಗ ಆ ಪುಸ್ತಕಗಳನ್ನು ರಚಿಸುವುದಕ್ಕೆ ಸಹಾಯ ಮಾಡಲು ಅವರಿಗೆ ಭಾಗ್ಯ ಲಭಿಸಿತು.

ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಅಧ್ಯಯನ ಮಾಡುವ ಅಭಿರುಚಿ ಅವರಿಗೆ ಬಹಳ ಇತ್ತು. ಅವರು ಯಾವುದಾದರೊಂದು ಗ್ರಂಥವನ್ನು ಯಾವಾಗಲೂ ಅಧ್ಯಯನ ಮಾಡುತ್ತಿದ್ದರು. ಅವರು ಪವಿತ್ರ ಖುರ್‌ಆನ್ ಕ್ರಮಬದ್ಧವಾಗಿ ಪಾರಾಯಣ ಮಾಡುವರು. ಪವಿತ್ರ ಖುರ್‌ಆನ್ ವಚನಗಳ ಬಗ್ಗೆ ಚಿಂತಿಸುವವರೂ ಆಗಿದ್ದರು. ಅವರು ಬಹಳ ನಿಷ್ಠೆಯಿಂದ ತಹಜ್ಜುದ್‌ಗೋಸ್ಕರ ನಿದ್ರೆಯಿಂದ ಎದ್ದು ತಹಜ್ಜುದ್ ಅನುಷ್ಠಿಸುವವರಾಗಿದ್ದರು. ಅವರು ಜಮಾಅತ್‌ಗೋಸ್ಕರ ಸೇವೆ ಮಾಡಲು ಸದಾ ಸಿದ್ಧವಾಗಿದ್ದವರೂ ಬಹಳ ನಿರ್ಭಯತೆಯಿಂದ ವರ್ತಿಸುವವರೂ ಆಗಿದ್ದರು. ಅವರು ಬಹಳ ವಿಶಾಲವಾಗಿ ಗ್ರಂಥಗಳನ್ನು ಅಧ್ಯಯನ ಮಾಡಿದವರಾಗಿದ್ದರು. ಅವರ ಬುದ್ಧಿಶಕ್ತಿ ಬಹಳ ಉತ್ತಮವಾಗಿತ್ತು. ಅವರು ಅಹ್ಮದಿಯಾ ಖಿಲಾಫತ್ ಬಗ್ಗೆ ಬಹಳ ಅಭಿಮಾನ ಹೊಂದಿದ್ದರು. ಅವರು ನಿಷ್ಠಾವಂತರೂ ನಿರ್ಭಯರೂ ಆದ ಅಹ್ಮದಿ ಆಗಿದ್ದರು. ಖಿಲಾಫತೆ ಅಹ್ಮದಿಯದ ಸುಲ್ತಾನೆ ನಸೀರ್ ಆಗಲು ಅವರು ತನ್ನ ಜೀವಿತಾದ್ಯಂತ ಪ್ರಯತ್ನಿಸುತ್ತಿದ್ದರು. ಅವರು ಜಮಾಅತಿನ ಸೇವಕನಾಗಿ ಜೀವಿಸಲು ಬಯಸಿದ್ದರು. ಅಲ್ಲಾಹನು ಅವರ ಆ ಪ್ರಯತ್ನದಲ್ಲಿ ಅವರನ್ನು ಜಯಶಾಲಿಯನ್ನಾಗಿ ಮಾಡಿರುವುದನ್ನು ನಾನು ಕಂಡಿದ್ದೇನೆ. ಅವರು ನನ್ನ ಕ್ಲಾಸ್ ಫೆಲೋ ಆಗಿದ್ದರು. ಬಾಲ್ಯದಿಂದ ಕಾಲೇಜು ವಿದ್ಯಾಭ್ಯಾಸದ ಕಾಲದಲ್ಲೂ ಅವರನ್ನು ನಾನು ಕಾಣುತ್ತಿದ್ದೆ. ಆಗಲೇ ಅವರಿಗೆ ಜ್ಞಾನಾರ್ಜನೆ ಮಾಡುವ ಬಗ್ಗೆ ಬಹಳ ಉತ್ಸಾಹವಿತ್ತು. ಅವರು ಕಾಲೇಜಿನ ಚರ್ಚಾ ಕೂಟದಲ್ಲಿ ಭಾಗವಹಿಸಿ ಉತ್ತಮವಾಗಿ ಚರ್ಚೆ ಮಾಡುವವರಾಗಿದ್ದರು. ಅವರು ಉತ್ತಮ ಭಾಷಣಗಾರರೂ ಆಗಿದ್ದರು. ಅವರು ಜಮಾಅತಿನ ಖುದ್ದಾಮ್ ಬಗ್ಗೆ ಮತ್ತು ವಾಕಿಫೀನೆ ಝಿಂದಗಿ ಬಗ್ಗೆ ಬಹಳ ಗೌರವ ಮತ್ತು ಪ್ರೀತಿಯ ಭಾವನೆ ಹೊಂದಿದವರಾಗಿದ್ದರು. ಅವರು ಅಹ್ಮದಿ ಸ್ನೇಹಿತರ ಧರ್ಮಬದ್ಧ ಆವಶ್ಯಕತೆಗಳನ್ನು ಈಡೇರಿಸಲು ಪ್ರತಿ ಸಮಯ ಸಿದ್ಧರಾಗಿರುತ್ತಿದ್ದರು. 2014ರಲ್ಲಿ ನಾನು ಅವರನ್ನು ಫಝ್ಲ್ ಉಮರ್ ಫೌಂಡೇಶನಿನ ಡೈರೆಕ್ಟರ್ ಆಗಿ ನೇಮಿಸಿದೆ. 2017ರಲ್ಲಿ ಫಝ್ಲ್ ಉಮರ್ ಫೌಂಡೇಶನಿನ ಚೆಯರ್‌ಮೇನ್ ಚೌಧರಿ ಹಮೀದ್ ನಸ್ರುಲ್ಲಾ ಖಾನ್ ಸಾಹಿಬ್ ನಿಧನ ಹೊಂದಿದಾಗ ನಾನು ತಾಹಿರ್ ಆರಿಫ್ ಸಾಹಿಬರನ್ನು ಚೆಯರ್‌ಮೇನ್ ಆಗಿ ನೇಮಿಸಿದೆ. ಅವರು ನಿಧನ ಹೊಂದುವ ತನಕ ಆ ಹುದ್ದೆಯಲ್ಲಿದ್ದರು. ಅವರು ಪತ್ನಿ ಅನೀಸ ತಾಹಿರ್ ಸಾಹಿಬ, ಪುತ್ರ ಇಸ್‌ಫಂದ್ ಯಾರ್ ಆರಿಫ್ ಮತ್ತು ಪುತ್ರಿಯರಾದ ತಯ್ಯಿಬ ಆರಿಫ್, ಅಝೀಝ ಔಜ್ ಮತ್ತು ಬಿನಾ ತಾಹಿರ್ ಆರಿಫ್‌ರನ್ನು ಅಗಲಿ ಹೋಗಿದ್ದಾರೆ.

ಅವರ ಪುತ್ರಿ ತಯ್ಯಿಬ ಆರಿಫ್ ತಾಹಿರ್ ಸಾಹಿಬ ಬರೆಯುತ್ತಾರೆ: ನಮ್ಮ ಪಿತ ಮುಹ್ತರಮ್ ತಾಹಿರ್ ಆರಿಫ್ ಸಾಹಿಬರಿಗೆ ಅಲ್ಲಾಹನು ಅತ್ಯಂತ ಹೆಚ್ಚು ಲೌಕಿಕ ಅಭಿವೃದ್ಧಿಯನ್ನು ಗಳಿಸುವ ಭಾಗ್ಯ ನೀಡಿದನು. ಆದರೂ ಅವರು ತನ್ನ ಅಹ್ಮದಿಯ್ಯತ್‌ನ ವ್ಯಕ್ತಿತ್ವವನ್ನು ಬಹಳ ಧೈರ್ಯದಿಂದಲೂ ಅಭಿಮಾನದಿಂದಲೂ ಕಾಪಾಡಿದರು. ಅವರು ಅತ್ಯಂತ ಪ್ರಾಮಾಣಿಕರೂ ವಿಶ್ವಾಸಾರ್ಹರೂ ಆಗಿದ್ದ ಅಧಿಕಾರಿಯಾಗಿದ್ದರು. ಅವರು ಧರ್ಮಕ್ಕೆ ಆದ್ಯತೆ ನೀಡುವವರೂ ಅಲ್ಲಾಹನ ಬಗ್ಗೆ ಉತ್ತಮ ಪ್ರತೀಕ್ಷೆ ಹೊಂದಿದವರೂ ಆದ ಸರಳ ಸ್ವಭಾವಿ ಮನುಷ್ಯರಾಗಿದ್ದರು. ಅವರು ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕರನ್ನು ಪ್ರೀತಿಸುವುದರಲ್ಲಿ ತಲ್ಲೀನರಾಗಿದ್ದರು. ನಮ್ಮ ತಾಯಿ ಹೇಳುತ್ತಾರೆ: ಯಾವಾಗಲೂ ನ್ಯಾಯ ಪ್ರಿಯರೂ ಮೃದು ಸ್ವಭಾವದವರಾಗಿಯೂ ನಾನು ಅವರನ್ನು ಕಂಡಿರುವೆನು. ಚಿಕ್ಕವರು, ದೊಡ್ಡವರು, ಶ್ರೀಮಂತರು, ಬಡವರು ಎಂಬ ತಾರತಮ್ಯ ಭಾವನೆ ರಹಿತರಾಗಿ ಯಾವಾಗಲೂ ತನ್ನ ಹುದ್ದೆಯನ್ನು ಪರಿಗಣಿಸದೆ ಬಹಳ ಉತ್ತಮವಾಗಿ ವರ್ತಿಸುತ್ತಿದ್ದರು. ಕೆಲವು ಸಂಬಂಧಿಕರು ಭಾವಪರವಶರಾಗಿ ತಮ್ಮ ಮೃತ ಸಂಬಂಧಿಕರ ಬಗ್ಗೆ ಬರೆಯುತ್ತಿರಬಹುದು ಆದರೆ ಇವರ ಬಗ್ಗೆ ಬರೆದುದೆಲ್ಲವೂ ವೈಯಕ್ತಿಕ ಅನುಭವದ ಮೂಲಕ ತಿಳಿದು ಕೊಂಡವುಗಳಾಗಿವೆ. ಅವರ ಬಗ್ಗೆ ಬರೆದುದೆಲ್ಲವೂ ಸತ್ಯವಾಗಿದೆ. ಅವರು ಹಾಗೆಯೇ ಇದ್ದರು.

ಮುಬಾರಕ್ ಸಿದ್ದೀಖಿ ಸಾಹಿಬ್ ಬರೆಯುತ್ತಾರೆ: ತಾಹಿರ್ ಆರಿಫ್ ಸಾಹಿಬರ ಪ್ರಕೃತಿಯಲ್ಲಿ ವಿನಯ ಭಾವನೆ ಬಹಳ ಇತ್ತು. ಅವರು ಆಯಾ ಕಾಲದ ಖಲೀಫರ ಬಗ್ಗೆ ಅತ್ಯಂತ

ನಿಷ್ಠಾವಂತರಾದವರೂ ಮತ್ತು ಅನುಸರಣೆ ದೋರುವವರೂ ಆಗಿದ್ದರು. ಅವರು ಉನ್ನತ ಮಟ್ಟದ ಕವಿಯೂ ಸಾಹಿತಿಯೂ ಆಗಿದ್ದರು. ನಾನು ಅವರೊಂದಿಗೆ ಒಮ್ಮೆ ಹೇಳಿದೆ ನಿಮಗೆ ಇಷ್ಟವಿರುವ ಒಂದು ಪದ್ಯ ಹೇಳಿರಿ. ಆಗ ಅವರು ಖಿಲಾಫತ್ ಬಗ್ಗೆ ತನ್ನ ನಿಷ್ಠೆಯ ಬಗ್ಗೆ ಈ ಪದ್ಯ ಹೇಳಿದರು: **ಆಖಾ ತೇರಾ ಗುಲಾಮ್ ತೇರೆ ಪಾಸ್ ಹೋ ಕಭೀ, ಖದ್‌ಮೋಂ ಮೇ ಲೌಟ್ ಜಾಯೆ ಬದನ್ ಘಾಸ್ ಹೋ ಕಭೀ.** ನನ್ನೊಡೆಯಾ ನಿಮ್ಮ ಗುಲಾಮ್ ಸದಾ ನಿಮ್ಮ ಜೊತೆಗಿರಲಿ. ನನ್ನ ಶರೀರ ನಿಮ್ಮ ಪಾದಗಳಡಿಯ ಹುಲ್ಲಾಗಲಿ ಸದಾ.

ಮುಬಾರಕ್ ಸಿದ್ದೀಖಿ ಸಾಹಿಬ್ ಹೇಳುತ್ತಾರೆ: ಒಮ್ಮೆ ಸ್ನೇಹಭರಿತರಾಗಿ ಕುಳಿತಿರುವಾಗ ನಾನು ಹೇಳಿದೆ: ತಾಹಿರ್ ಸಾಹಿಬ್! ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಗೆ ಒಂದಲ್ಲ ಒಂದು ರೀತಿಯಲ್ಲಿ ಬಹಳ ಗೌರವ ದಯಪಾಲಿಸಿದ್ದಾನೆ. ತಮಗೆ ಪೋಲೀಸ್ ವಿಭಾಗದಲ್ಲಿ ಬಹಳ ದೊಡ್ಡ ಹುದ್ದೆಯ ಗೌರವ ಲಭಿಸಿದೆ. ಅವರು ಹೇಳಿದರು: ಎಲ್ಲದಕ್ಕಿಂತಲೂ ದೊಡ್ಡ ಗೌರವ ನಾನು ಅಹ್ಮದಿಯಾಗಿರುವುದಾಗಿದೆ. ಮತ್ತು ಖಲೀಫರ ಕ್ಲಾಸ್ ಫೆಲೋ ಆಗಿದ್ದುದೂ ಬಹಳ ದೊಡ್ಡ ಗೌರವದ ವಿಷಯವಾಗಿದೆ.

ವಿದ್ಯಾರ್ಥಿಗಳಾಗಿದ್ದಾಗ ಸಹಪಾಠಿಗಳ ರೂಪದಲ್ಲಿ ನಮ್ಮ ಮಾತುಕತೆಗಳು ನಡೆಯುತ್ತಿದ್ದುವು. ಆದರೆ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾ ನನ್ನನ್ನು ನಾಝಿರ್ ಅಅ್‌ಲಾ ಆಗಿ ನೇಮಿಸಿದಾಗ ಅವರು ನನ್ನೊಂದಿಗೆ ಬಹಳ ಆದರ ಭಾವದಿಂದ ವರ್ತಿಸಲು ಪ್ರಾರಂಭಿಸಿದರು. ಖಿಲಾಫತ್ ನಂತರ ಅವರ ನಿಷ್ಠೆ ಬಹಳ ವರ್ಧಿಸಿತ್ತು – ಅಲ್ಲಾಹನ ಅನುಗ್ರಹದಿಂದ.

ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳನ್ನೂ ಜಮಾಅತ್ ಮತ್ತು ಖಿಲಾಫತ್‌ನೊಂದಿಗೆ ಪರಿಪೂರ್ಣ ನಿಷ್ಠಾವಂತರನ್ನಾಗಿ ಅಲ್ಲಾಹನು ಮಾಡಲಿ – ಆಮೀನ್.

—————————*****—————————

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِىَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ - عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَاءِ ذِى الْقُرْبٰى وَ يَنْهٰى
عَنِ الْفَحْشَاءِ وَ الْمُنْكَرِ وَ الْبَغْىِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ -


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London, UK. On 30-08-2019*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon